**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ಯ ವಲ್ಯಾಪುರ ರವರು ನಿಯಮ-330 ರಡಿ ಮಂಡಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಸೂಚನೆ:**

ಶ್ರೀ ಮಂಜುನಾಥ ಗ್ರಾಮೋದ್ಯೋಗ ಸಂಘ ಮತ್ತಕ್ಕೂರು ಶಿವಕೋಟೆ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು ಇವರು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಜಿಲ್ಲಾ ಕಛೇರಿ ಬೆಂಗಳೂರು ನಗರ ಜಿಲ್ಲೆಯಿಂದ ಧನ ಸಹಾಯ ಸ್ವರೂಪ ಯೋಜನೆಯಡಿಯಲ್ಲಿ 1984-85ನೇ ಸಾಲಿನಲ್ಲಿ ಕಾಟೇಜ್ ಮ್ಯಾಚ್ ಇಂಡಸ್ಟ್ರಿಯಲ್ಲಿ ಗೃಹ ಬೆಂಕಿಕಡ್ಡಿ ಕೈಗಾರಿಕೆ ಪ್ರಾರಂಭಿಸಲು ದಿನಾಂಕ: 26.03.1985 ರಲ್ಲಿ ಸಾಲ ಪಡೆದು ಘಟಕವನ್ನು ಸ್ಥಾಪಿಸದೆ ಹಣ ದುರುಪಯೋಗ ಪಡಿಸಿಕೊಂಡಿದ್ದು, ಇವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ಜರುಗಿಸುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

ಶ್ರೀ ಮಂಜುನಾಥ ಖಾದಿ ಗ್ರಾಮೋದ್ಯೋಗ ಸಂಘ, ಮತ್ತೂಕೂರು, ಶಿವಕೋಟೆ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು, ಈ ಸಂಘವು ಧನ ಸಹಾಯ ಸ್ವರೂಪ ಯೋಜನೆಯಡಿಯಲ್ಲಿ 1984-85ನೇ ಸಾಲಿನಲ್ಲಿ ಗೃಹ ಬೆಂಕಿಕಡ್ಡಿ ಉದ್ದಿಮೆಯನ್ನು ಸ್ಥಾಪಿಸಲು ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ರೂ.22,000/-ಗಳು ಮಂಜೂರಾಗಿರುತ್ತದೆ.

ಸದರಿ ಸಂಘಕ್ಕೆ ಮೊದಲನೇ ಕಂತಿನ ಯಂತ್ರೋಪಕರಣಗಳ ಬಾಬ್ತು ರೂ.11,000/-ಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿಯವರು ಉದ್ದಿಮೆಯನ್ನು ಪ್ರಾರಂಭಿಸದೇ ಇರುವುದರಿಂದ 2ನೇ ಕಂತಿನ ಬಾಬ್ತು ಜಂಟಿ ಖಾತೆಯಲ್ಲಿರುವ ಮೊತ್ತ ರೂ.11,000/- ಮತ್ತು ಬ್ಯಾಂಕ್ ಗಳಿಕೆ ಬಡ್ಡಿ ರೂ.1,541/- ಒಟ್ಟು ರೂ.12,541/-ಗಳನ್ನು ಡಿ.ಡಿ.ನಂ.388929, ದಿನಾಂಕ:22.02.1988 ರಂತೆ ಖಾದಿ ಮಂಡಳಿಯ ಕೇಂದ್ರ ಕಛೇರಿಗೆ ವಾಪಸ್ಸು ಪಡೆಯಲಾಗಿದೆ.

ಸಂಘಕ್ಕೆ ಯಂತ್ರೋಪಕರಣಗಳ ಖರೀದಿಗಾಗಿ ಬಿಡುಗಡೆ ಮಾಡಿರುವ ಬಾಬ್ತು ಅಸಲು ರೂ.11,000/- ಮತ್ತು ಬಡ್ಡಿ ರೂ.9,000/- ಗಳನ್ನು ಸಂಪೂರ್ಣವಾಗಿ ಮಂಡಳಿಗೆ (1) ಡಿ.ಡಿ.ನಂ.001391, ದಿನಾಂಕ:22.10.1999 ರಂದು ರೂ.5,000/- (2) ಡಿ.ಡಿ.ನಂ.002903, ದಿನಾಂಕ:30.03.2000 ರಂದು ರೂ.5,000/- ಹಾಗೂ ಡಿ.ಡಿ.ನಂ.004318, ದಿನಾಂಕ:29.08.2000 ರೂ.10,000/- ಗಳಂತೆ ಒಟ್ಟು ಸಾಲ ರೂ.22,000/- ಹಾಗೂ ಬಡ್ಡಿ ರೂ.10,541/-ಮರುಪಾವತಿಸಿರುತ್ತಾರೆ.

ಶ್ರೀ ಮಂಜುನಾಥ ಖಾದಿ ಗ್ರಾಮೋದ್ಯೋಗ ಸಂಘ, ಮತ್ತೂಕೂರು, ಶಿವಕೋಟೆ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು, ಈ ಸಂಘದಿಂದ ಮಂಡಳಿಗೆ ಬರಬೇಕಾದ ಯಾವುದೇ ಬಾಕಿ ಇರುವುದಿಲ್ಲ.

ಆದರೂ ಸಹ ಖಾದಿ ಮಂಡಳಿಯಿಂದ ಗೃಹ ಬೆಂಕಿಕಡ್ಡಿ ಉದ್ದಿಮೆಗೆ ಸಾಲ ಪಡೆದು ಅದೇ ಉದ್ದೇಶಕ್ಕೆ ಬಳಕೆ ಮಾಡದೇ ಬೇರೆ ಉದ್ದೇಶಕ್ಕೆ ಹಣ ಬಳಕೆಯಾಗಿರುವುದು ಕಂಡು ಬಂದಲ್ಲಿ ಸದರಿ ಸಂಘದ ಮೇಲೆ ಕ್ರಮ ಜರುಗಿಸಲಾಗುವುದು.

**ಸಿಐ 8 ಎಸ್‌ಎಲ್‌ವಿ 2026**

**(ಶರಣ ಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ
ಉದ್ಯಮಗಳ ಸಚಿವರು